ಓ ಎಸ್ ನಂಬರ 12/2019
ಡಿ ಡಬ್ಲ್ಯೂ -2

**ದಿನಾಂಕಃ 25.01.2025.**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನನ್ನ ಮೂಲ ಊರು ಖಾನಾಪೂರ ತಾಲೂಕಿನ ಹಣಸಿ ಗ್ರಾಮ. ನಾನು 14.09.2007 ರಿಂದ ವಕೀಲರ ವೃತ್ತಿ ಮಾಡುತ್ತಿದ್ದೇನೆ. ನನಗೆ ನ್ಯಾಯಾಲಯದಿಂದ ಸಾಕ್ಷಿಗಾಗಿ ಸಮನ್ಸ ಬಂದಿರುತ್ತದೆ. ನಾನು ಪವರ ಆಟರ್ನಿಯನ್ನು ಡ್ರಾಫ್ಟ ಮಾಡಿದ್ದು, ಸದರಿ ಪವರ್ ಆಫ್ ಆಟರ್ನಿಯಲ್ಲಿ identification signature ನನ್ನದು ಇದ್ದು, ಆ ಕಾರಣ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನ್ಯಾಯಾಲಯದಿಂದ ಸಮನ್ಸ ಬಂದಾಗ ನಾನು ಮೌಖಿಕವಾರಿ ಸಾಕ್ಷಿ ನುಡಿಯಬಹುದಾಗಿತ್ತು ಎಂದರೆ ಸರಿ. ನನ್ನನ್ನು ಆರ್ ಎ ಪಾಟೀಲ ವಕೀಲರಿಗೆ ಭೇಟ್ಟಿ ಮಾಡಿಸಿದ್ದವರು ಯಾರು ಎಂದರೆ ಸಾಕ್ಷಿ ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿತ್ತು,ಆದ ಕಾರಣ ನಾನೇ ಅವರ ಬಳಿಗೆ ಹೋಗಿರುತ್ತೇನೆ. ನ್ಯಾಯಾಲಯದಿಂದ ಸಮನ್ಸ ಜಾರಿಯಾಗುವ ಪೂರ್ವದಲ್ಲಿ 1ನೇ ಪ್ರತಿವಾದಿ ನನ್ನನ್ನು ಭೇಟ್ಟಿಯಾಗಿ ಸಾಕ್ಷಿ ನುಡಿಯಬೇಕು ಎಂದು ಹೇಳಿದ್ದರು, ನಾನು ನ್ಯಾಯಾಲಯದಿಂದ ಸಮನ್ಸ ಬಂದರೆ ಮಾತ್ರ ನುಡಿಯುತ್ತೇನೆ ಎಂದು ಹೇಳಿ ಕಳುಹಿಸಿದ್ದೇನು. ವಾದಿಯರ ಪರಿಚಯ ನನಗೆ ಮೊದಲು ಇರಲಿಲ್ಲ, ನಾನು ಬೆಳಗಾವಿ ನಗರ ನ್ಯಾಯಾಲಯದ ಆವರಣದಲ್ಲಿದ್ದಾಗ ವಾದಿಯರು ನನ್ನನ್ನು ಭೇಟ್ಟಿಯಾಗಿ ಅವರಿಗೆ ಆರ್ ಎಸ್ ನಂಬರ 54 ಮರಿಗೇರಿ ಹಳ್ಳಿ ತಾಃ ಬೈಲಹೊಂಗಲ ಸ್ವತ್ತಿಗೆ ಸಂಬಂಧಿಸಿದಂತೆ ಪವರ್ ಆಫ್ ಆಟರ್ನಿ ಮಾಡಬೇಕಾಗಿದೆ ಎಂದು ಹೇಳಿದರು, ನಾನು ಅವರಿಗೆ ಮಾಹಿತಿ ನೀಡಿರುತ್ತೇನೆ. ನನ್ನನ್ನು ಯಮನಪ್ಪ, ಸಾವಕ್ಕ, ಬಾಳವ್ವ, ಸದೇಪ್ಪ ಮತ್ತು ಬಸ್ಸಪ್ಪ ರವರು ಭೇಟ್ಟಿಯಾಗಿದ್ದರು. 19.09.2011 ರಂದು ಮೊದಲು ಬಾರಿಗೆ ನನ್ನನ್ನು ಭೇಟ್ಟಿಯಾದಾಗ ಸದರಿಯವರು ಮಾತ್ರ ನನ್ನನ್ನು ಭೇಟ್ಟಿಯಾಗಿರುತ್ತಾರೆ. ಯಾವ ಕಾರಣಕ್ಕಾಗಿ ಪವರ ಆಫ್ ಆಟರ್ನಿ ಬೇಕು ಎಂದು ಸದರಿಯವರು ಕೇಳಿರುತ್ತಾರೆ ಎಂದರೆ ಸಾಕ್ಷಿ, ಮಾರಾಟ ಮಾಡಲು , ದಾನ ನೀಡಲು, ಅಡಮಾನ ಇಡಲು ಹಾಗೂ ಇನ್ನಿತರ ಕಾನೂನುಬದ್ದ ಕಾರ್ಯಗಳಿಗೆ ಹಾಗೂ ನ್ಯಾಯಾಲಯಕ್ಕೆ ಸಂಬಂಧಿಸಿದಂತೆ ವಕೀಲರನ್ನು ನೇಮಕ ಮಾಡಲು, ರಾಜೀ ಸಂದಾನ ಮಾಡಿಕೊಳ್ಳಲು ಹಾಗೂ ಇನ್ನಿತರ ಕಾನೂನುಬದ್ದ ಕ್ರಮ ಕೈಗೊಳ್ಳಲು, ಆ್ ಎಸ್ ನಂಬರ 54 10 ಎಕರೆ 23 ಗುಂಟೆಯ ದಕ್ಷಿಣದ ಭಾಗದ 4 ಎಕರೆ 11 ಗುಂಟೆಗೆ ಸಂಬಂಧಿಸಿದಂತೆ ಪವರ್ ಆಫ್ ಆಟರ್ನಿ ಬೇಕಾಗಿರುತ್ತದೆ ಎಂದು ಹೇಳಿರುತ್ತಾರೆ. ಆಗ ನಾನು ಉತಾರವನ್ನು ನೋಡಿರುತ್ತೇನೆ. ಅದರಲ್ಲಿ ಎಷ್ಟು ಜನರ ಹೆಸರು ಇತ್ತು ಎಂದರೆ ಸಾಕ್ಷಿ ಈಗ ನೆನಪಿರುವುದಿಲ್ಲ ಎನ್ನುತ್ತಾರೆ. ಸದರಿ ಉತಾರದಲ್ಲಿ 10

ಎಕರೆ 23 ಗುಂಟೆ ಒಟ್ಟಾಗಿ ಇತ್ತೋ ಅಥವಾ 04 ಎಕರೆ 11 ಗುಂಟೆ ಪ್ರತ್ಯೇಕವಾಗಿ ಇತ್ತೊ ಎಂದರೆ ಸಾಕ್ಷಿ ನನಗೆ ಅಷ್ಟು ಗಮನಕ್ಕೆ ಇಲ್ಲ ಬಹಳ ವರ್ಷವಾಯಿತು ಎನ್ನುತ್ತಾರೆ. ಸಾಕ್ಷಿಗೆ ನಿಶಾನೆ ಡಿ 2 ನ್ನು ತೋರಿಸಿದ್ದು, ಅದರಲ್ಲಿ ಹೆಸರು ನಮೂದಿಸಿರುವವರೆಲ್ಲರೂ ಸಹಿ ಮಾಡಿರುತ್ತಾರಾ ಎಂದರೆ ಸಾಕ್ಷಿ ಸದರಿ ದಾಖಲೆಯನ್ನು ನೋಡಿ, ಸದರಿ ದಾಖಲೆ ದಿನಾಂಕ 24.12.2012 ಇರುವುದರಿಂದ, ನಾನು ದಿನಾಂಕ 22.09.2011 ರಂದು ಪವರ್ ಆಫ್ ಆಟರ್ನಿಯನ್ನು ತಯಾರಿಸಿಕೊಟ್ಟಿರುತ್ತೇನೆ. ಸದರಿ ಪವರ ಆಫ್ ಆಟರ್ನಿಯಲ್ಲಿ ಯಮನಪ್ಪ, ಸಾವಕ್ಕ, ಬಾಳವ್ವ, ಸದೇಪ್ಪ, ಬಸ್ಸಪ್ಪ ರವರ ಸಹಿ ಇರುತ್ತದೆ. ಸದರಿ ದಾಖಲೆಯಲ್ಲಿ ಸಿದ್ದವ್ವ ಮತ್ತು ನೀಲವ್ವ ನಿಚ್ಚನಿಕೆ ರವರ ಸಹಿ ಇರುವುದಿಲ್ಲ, ಅವರು ಸಹ ಜಂಟಿ ಮಾಲೀಕರು ಎಂದರೆ ಸಾಕ್ಷಿ ನನ್ನ ಬಳಿ ಸದರಿ 5 ಜನ ಮಾತ್ರ ಬಂದಿದ್ದರು, ಅವರು ನೀಡಿದ ಮಾಹಿತಿಯಂತೆ ಪವರ್ ಆಫ್ ಆಟರ್ನಿ ನೀಡಿರುತ್ತೇನೆ ಎನ್ನುತ್ತಾರೆ. ಆರ್ ಎಸ್ ನಂಬರ 54 ವಿಸ್ತೀರ್ಣ 10 ಎಕರೆ 23 ಗುಂಟೆ ಅಖಂಡ ಇರುವ ಕಾರಣ ಪ್ರತ್ಯೇಕವಾಗಿ 04 ಎಕರೆ 11 ಗುಂಟೆಗೆ ಪವರ ಆಫ್ ಆಟರ್ನಿ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ.

2 . ದಾವಾ ಸ್ವತ್ತು ಮರಿಗೇರಿ ತಾಃ ಬೈಲಹೊಂಗಲ. ವಾದಿಯವರು ಮರಿಗೇರಿ ಗ್ರಾಮದವರು. ಪ್ರತಿವಾದಿ ನಂಬರ 1 ರವರು ತೇಗೂರ ಗ್ರಾಮದವರು. ವಾದಿ ಮತ್ತು ಪ್ರತಿವಾದಿವಾಯ ಭಾಷೆ ಕನ್ನಡ. ಕನ್ನಡ ಭಾಷೆಯಲ್ಲಿಯೇ ನನಗೆ ಮಾಹಿತಿ ನೀಡಿದ್ದಾರೆ. ನೀವು ಪವರ ಆಫ್ ಆಟರ್ನಿಯನ್ನು ಕನ್ನಡದಲ್ಲಿಯೇ ಮಾಡಬೇಕು ಎಂದರೆ ಸಾಕ್ಷಿ ನನಗೆ ಕನ್ನಡದಲ್ಲಿ ಡ್ರಾಫ್ಟ ಮಾಡಲು ಬರುವುದಿಲ್ಲ, ನಾನು ಇಂಗ್ಲೀಷನಲ್ಲಿ ಡ್ರಾಫ್ಟ ಮಾಡಿ ಟೈಪ ಮಾಡಿಸಿ ಅವರಿಗೆ ಓದಿ ತಿಳಿ ಹೇಳಿರುತ್ತೇನೆ. ನಿಶಾನೆ ಡಿ 1 ರಲ್ಲಿ ನೀವು ಇಂಗ್ಲೀಷನಲ್ಲಿ ಡ್ರಾಫ್ಟ ಮಾಡಿ dictation ಕೊಟ್ಟಿರುವುದಕ್ಕೆ ನಿಶಾನೆ ಡಿ 1 ರಲ್ಲಿ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಅದರ ಅಗತ್ಯ ಇರಲಿಲ್ಲ ಎನ್ನುತ್ತಾರೆ. ನಿಶಾನೆ ಡಿ 1 ರಲ್ಲಿ ನೀವು ಗುರುತಿಸಿದ್ದೀರಿ ಎಂದು ಮಾತ್ರ ಸಹಿ ಮಾಡಿರುತ್ತೀರಿ ಆದಕಾರಣ ನಿಶಾನೆ ಡಿ 1 ನ್ನು ನೀವು ತಯಾರಿಸಿರುವುದಿಲ್ಲ, ತಯಾರಿಸಿದವರು ಬೇರೆಯವರು ಎಂದರೆ ಸರಿಯಲ್ಲ. ನಿಶಾನೆ ಡಿ1 ನ್ನು ನಾನು ತಯಾರಿಸಿರುವುದಿಲ್ಲ, dictation ಕೊಟ್ಟಿರುವುದಿಲ್ಲ, ವಾದಿಯರಿಗೆ ಓದಿಯು ಹೇಳಿರುವುದಿಲ್ಲ, ಅದನ್ನು ಬೇರೆಯವರೆ ತಯಾರಿಸಿರುತ್ತಾರೆ, ಪರಿಚಯ ಇರುವುದಿಲ್ಲ, ನೋಟರಿಯವರು ನನ್ನನ್ನು ಕರೆದು ನನಗೆ ಸಹಿ ಮಾಡಲು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಇಂಗ್ಲೀಷನಲ್ಲಿ ನಿಶಾನೆ ಡಿ 1 ನ್ನು ತಯಾರಿಸಲುಯಾರಾದರೂ ಹೇಳಿರುತ್ತಾರಾ ಎಂದರೆ ಸಾಕ್ಷಿ ನಾನು ಇಂಗ್ಲೀಷನಲ್ಲಿ ತಯಾರಿಸಿ ಓದಿ ತಿಳಿಸುತ್ತೇನೆ ಎಂದು ಹೇಳಿದ್ದೆ ಎನ್ನುತ್ತಾರೆ ಅದರ ಪ್ರಕಾರ ನಾನು ಓದಿ ತಿಳಿಸಿರುತ್ತೇನೆ ಎನ್ನುತ್ತಾರೆ. ಪವರ್ ಆಫ್ ಆಟರ್ನಿ ಪ್ರಕಾರ ಖರೀದಿ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ.

3. ನನಗೆ ಮಾಹಿತಿ ನೀಡುವ ಸಮಯದಲ್ಲಿ ನ್ಯಾಯಾಲಯದಲ್ಲಿ ದಾವೆ ಇದ್ದ ಬಗ್ಗೆ ಹೇಳಿರುವುದಿಲ್ಲ. ನ್ಯಾಯಾಲಯದಲ್ಲಿ ದಾವೆಗಳು ಚಾಲ್ತಿಯಿರುತ್ತವೆ ಆ ಬಗ್ಗೆ ತಿರ್ಪಿಗೆ ಬೇಕು ಎಂದು ನನ್ನ ಬಳಿ ಹೇಳಿರುವುದಿಲ್ಲ. ನಿಮಗೆ ನಿಶಾನೆ ಡಿ 1 ರಲ್ಲಿ ಏನನ್ನು ಬರೆದಿರುತ್ತೀರಾ ಎಂದು ಹೇಳಲಾಗುವುದಾ ಎಂದರೆ ಸಾಕ್ಷಿ ಹೇಳಲಾಗುತ್ತದೆ ಚೆಕಬಂಧಿ ಏನು ಬರೆದಿರುತ್ತೀರಾ ಎಂದರೆ ಹೇಳಲಾಗುವುದಾ ಎಂದರೆ ಸಾಕ್ಷಿ ಬಹಳ ವರ್ಷಗಳಾಗಿದೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ಅಡಿವೆಪ್ಪ ರವರಿಗೆ ಸದರಿಯವರು ಪವರ್ ಆಫ್ ಆಟರ್ನಿ ನೀಡಿರುತ್ತಾರೆ. ಸದರಿಯವರು ಮಾರಾಟ ಮಾಡಲು, ದಾನ ನೀಡಲು, ಅಡಮಾನ ನೀಡಲು, ಬೋಗ್ಯ ನೀಡಲು ಹಾಗೂ ಇನ್ನಿತರ ಕಾರ್ಯಗಳನ್ನು ಮಾಡಲು, ಅಧಿಕಾರ ನೀಡಿದ ಬಗ್ಗೆ ನಮೂದಿಸಿರುತ್ತೇನೆ. ಉಳಿದದ್ದು ಏನು ಬರೆದಿರುತ್ತೀರಿ ಎಂದರೆ ಸಾಕ್ಷಿ ನಾನು 2011 ರಲ್ಲಿ ನಾನು ಡ್ರಾಫ್ಟ ಮಾಡಿರುತ್ತೇನೆ, ಪ್ರತಿಯೊಂದು ಖಂಡಿಕೆಗಳನ್ನು ಯಥಾವತ್ತಾಗಿ ಹೇಳಲಾಗುವುದಿಲ್ಲ ಎನ್ನುತ್ತಾರೆ. ನಿಮಗೆ ಮಾರಾಟ ಮಾಡುವ ಅಧಿಕಾರ ನೀಡಿದ್ದಾರೆ ಎಂದು ಹೇಳುವುದು ಮಾತ್ರ ಗೊತ್ತಿರುತ್ತದೆ ಉಳಿದದ್ದು ಗೊತ್ತಿರುವುದಿಲ್ಲ, ಎಂದರೆ ಸರಿಯಲ್ಲ. ಪ್ರತಿವಾದಿ ಪರ ವಕೀಲರಿಂದ ನನ್ನ ಸಾಕ್ಷಿ ವಿಚಾರಣಾ ಅಪಿಡೇವಿಟ್ ಹಾಕಿಸದೇ ನೇರವಾಗಿ ಮೌಖಿಕವಾಗಿ ಸಾಕ್ಷಿ ನುಡಿಯಬಹುದಾಗಿತ್ತು ಆದರೆ ಸದರಿ ರೀತಿ ಅಪಿಡೇವಿಟ್ ಸಲ್ಲಿಸಬಾರದು ಅಂತಾ ಎಲ್ಲಿಯು ಇಲ್ಲ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಿಶಾನೆ ಡಿ 1 ನ್ನು ಗಣಕೀಕೃತ ಬೆರಳಚ್ಚುಗಾರರಿಗೆ ಬೆರಳಚ್ಚು ಮಾಡಿಸಿದೇನು ಎಂದು ಹೇಳಿದ್ದು, ಸದರಿ ಬೆರಳಚ್ಚುಗಾರರು ಯಾರು ಎಂದರೆ ಸಾಕ್ಷಿ ನಮ್ಮ ಲಾ ಚೆಂಬರನಲ್ಲಿ ಗೀತಾ ಎಂದು ಟೈಪಿಸ್ಟ ಇದ್ದು, ಅವರಿಗೆ ಹೇಳಿ ಟೈಪ ಮಾಡಿಸಿರುತ್ತೇನೆ. ನಿಶಾನೆ ಡಿ 1 ರಲ್ಲಿ ಸದರಿಯವರ ಹೆಸರು ನಮೂದು ಇರುವುದಿಲ್ಲ, ಅದರ ಅವಶ್ಯಕತೆ ಇರುವುದಿಲ್ಲ, ಆ ಕಾರಣ ನಮೂದಿಸಿರುವುದಿಲ್ಲ ಎನ್ನುತ್ತಾರೆ.

4. ವಾದಿಯರು ಸಿದ್ದವ್ವ ನೀಲಪ್ಪ ನಿಚ್ಚಣಿಕೆ ರವರ ವಿರುದ್ದ ದಾವೆ ಹೂಡಿದ್ದರು ಎಂದರೆ ಸಾಕ್ಷಿ ಮಾಹಿತಿ ಇಲ್ಲ ಎನ್ನುತ್ತಾರೆ. ಸದರಿ ದಾವೆಯಲ್ಲಿ ಹಾಜರಾಗಲು ಹಾಗೂ ಕೇಸ ನಡೆಸಲು ಪವರ್ ಆಫ್ ಆಟರ್ನಿ ಕೊಡಬೇಕಾಗಿತ್ತು ಆದರೆ ನಾನು ಮಾರಾಟಕ್ಕಾಗಿ ಎಂದು ಖೊಟ್ಟಿಯಾಗಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಹಾಜರಾಗಿ ಕೇಸ್ ನಡೆಸಲು ಮಾತ್ರ ಅಧಿಕಾರ ಪತ್ರ ಮಾಡಬೇಕಾಗಿತ್ತು ಅದರ ಪ್ರಕಾರ ಸದರಿ ವಿಷಯಗಳನ್ನು ನಮೂದಿಸಿ ಅದರೊಂದಿಗೆ ಮಾರಾಟ ಎನ್ನುವುದನ್ನು ಇಂಗ್ಲೀಷನಲ್ಲಿ ಉಲ್ಲೇಖ ಮಾಡಿ, ವಾದಿಯರಿಗೆ ಗೊತ್ತಾಗದ ಹಾಗೇ ಆಂಗ್ಲ ಭಾಷೆಯಲ್ಲಿ ಜಿ ಪಿ ಎ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಬೇರೆಯವರು ನಿಶಾನೆ ಡಿ 1 ನ್ನು ಆಂಗ್ಲ ಭಾಷೆಯಲ್ಲಿ ತಯಾರು

ಮಾಡಿದುದ, ನನಗೆ ಸಹಿ ಗುರುತಿಸಲು ಮಾತ್ರ ಸಹಿ ಮಾಡಲು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ ಆದಕಾರಣ ನಿಶಾನೆ ಡಿ 1 ರಲ್ಲಿ ಯಾರು ತಯಾರಿಸಿರುತ್ತಾರೆ ಹಾಗೂ ಯಾರು ಟೈಪ ಮಾಡಿರುತ್ತಾರೆ ಎಂಬುದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

5. ನಿಶಾನೆ ಡಿ 1 ನ್ನು ತಯಾರಿಸಿ ನಂತರ ನೋಟರಿಗಾಗಿ ಎಂ ಟಿ ಪಾಟೀಲ ನೋಟರಿ ವಕೀಲರ ಬಳಿ ಹೋಗಿರುತ್ತೇನೆ. ಸದರಿಯವರು ಪ್ರಧಾನ ಜಿಲ್ಲಾ ನ್ಯಾಯಾಧೀಶರ ಕೋರ್ಟನ ಪಕ್ಕದಲ್ಲಿ ಇರುವ ಬೆಳಗಾವಿ ಬಾರ್ ಅಸೋಸಿಯೇಶನ ಪ್ರಿಮೈಸಸ್ ನಲ್ಲಿ ಇರುತ್ತಾರೆ. ನೋಟರಿಯವರ ಬಳಿ ಹೋದ ನಂತರ ನಾನು ವಾದಿ ಹಾಗೂ 1ನೇ ಪ್ರತಿವಾದಿಯ ಬಗ್ಗೆ ಮಾಹಿತಿ ನೀಡಿರುತ್ತೇನೆ, ಹಾಗೂ ಪವರ್ ಆಫ್ ಆಟರ್ನಿ execute ಮಾಡುವ ಬಗ್ಗೆ ನೋಟರಿಯರಿಗೆ ಮಾಹಿತಿ ನೀಡಿರುತ್ತೇನೆ. ವಾದಿಯರಿಂದ ಮತ್ತು 1ನೇ ಪ್ರತಿವಾದಿಯಿಂದ ಫೋಟೋ ಹಾಗೂ I.D. Proof ಗಳನ್ನು ನೋಟರಿ ಎಂ ಟಿ ಪಾಟೀಲ ರವರು ಪಡೆದುಕೊಂಡರು. ಸದರಿ ಪೊಟೋಗಳನ್ನು ನೋಟರಿ ರಜಿಸ್ಟರಗೆ ಅಂಟಿಸಿರುತ್ತಾರೆ ಹಾಗೂ ನಿಶಾನೆ ಡಿ 1 ಕ್ಕು ಸಹ ಅಂಟಿಸಿರುತ್ತಾರೆ. ನಿಶಾನೆ ಡಿ 1 ರ ಪೇಜ್ ನಂಬರ 4 ಮತ್ತು 5 ರಲ್ಲಿ ಫೋಟೋ ಅಂಟಿಸಿದರು. ಸಾಕ್ಷಿಗೆ ನಿಶಾನೆ ಡಿ 4ಎ ತೋರಿಸುತ್ತಿದ್ದು, ಅದರಲ್ಲಿ ಪೊಟೋಗಳು ಕಾಣಿಸುತ್ತಿರುವುದಿಲ್ಲ ಎಂದರೆ ಸರಿ. ನಾನು ಹಾಗೂ ಪ್ರತಿವಾದಿ ನಂಬರ 1 ರವರು ಸೇರಿ ಖಾಲಿ ಬಾಂಡ್ ಪೇಪರನಲ್ಲಿ ವಾದಿಯ ಸಹಿ ಪಡೆದುಕೊಂಡು ಹಾಗೂ ಫೋಟೋ ತೆಗೆದುಕೊಂಡು ಖೊಟ್ಟಿಯಾಗಿ ನಿಶಾನೆ ಡಿ 1 ನ್ನು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರು ಆಸ್ತಿಯನ್ನು ಮಾರಾಟ ಮಾಡಬೇಕು ಎಂಬ ಉದ್ದೇಶ ಇರಲಿಲ್ಲ ಆ ರೀತಿ ಸದರಿಯವರು, ಪವರ ಆಫ್ ಆಟರ್ನಿಯನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂಬರ 1 ವಾದಿ ನಂಬರ 2 ರವರ ಅಣ್ಣನಿರುವ ಕಾರಣ ನ್ಯಾಯಾಲಯದಲ್ಲಿ ಹಾಜರಾಗುವ ಸಂಬಂಧ ಅಧಿಕಾರ ಪತ್ರ ಕೊಡುತ್ತೇವೆ ಎಂದು ಹೇಳಿದ್ದರು, ಅದನ್ನೇ ದುರುಪಯೋಗ ಪಡಿಸಿಕೊಂಡು ಖಾಲಿ ಬಾಂಡ್ ಪೇಪರನಲ್ಲಿ ವಾದಿಯರ ಸಹಿ ಪಡೆದುಕೊಂಡು ನಿಶಾನೆ ಡಿ 1 ನ್ನು ಬೆಳಗಾವಿ ನಗರ ನ್ಯಾಯಾಲಯದಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಬೈಲಹೊಂಗಲ ಹಾಗೂ ಕಿತ್ತೂರಲ್ಲಿಯೂ ಸಹ ನ್ಯಾಯಾಲಯಗಳಿದ್ದು, ಅಲ್ಲಿ ನೋಟರಿಯರು ಇದ್ದರು ಎಂದರೆ ಸಾಕ್ಷಿ ನನ್ನ ಬಳಿ ಬಂದಿದ್ದರು ನಾನು ಮಾಡಿಕೊಟ್ಟಿರುತ್ತೇನೆ ಎನ್ನುತ್ತಾರೆ. ಬೈಲಹೊಂಗಲ ಹಾಗೂ ಕಿತ್ತೂರ ನ್ಯಾಯಾಲಯದಲ್ಲಿ ಪವರ್ ಆಫ್ ಆಟರ್ನಿ ತಯಾರಿಸಿದರೆ ಖರೀದಿಗಾಗಿ ಪವರ ಆಫ್ ಆಟರ್ನಿ ಆಗಿದೆ ಎಂದು ಗೊತ್ತಾಗುತ್ತದೆ ಎಂದು, ಬೆಳಗಾವಿ ನಗರದಲ್ಲಿ ನಾನು ಹಾಗೂ 1 ನೇ ಪ್ರತಿವಾದಿ ಮಿಲಾಪಿಯಾಗಿ ಪವರ್ ಆಫ್ ಆಟರ್ನಿಯನ್ನು

ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನಿಶಾನೆ ಡಿ 1 ಖೊಟ್ಟಿಯಾಗಿರುತ್ತದೆ ವಾದಿಗಳು ಮಾರಾಟ ಮಾಡಲು ನಿಶಾನೆ ಡಿ 1 ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

sd/-

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ

**18-12-2024**